# ವಿದ್ಯಾರ್ಥಿಗಳ ಕಲಿಕೆಯ ಬಲವರ್ಧನೆಗಾಗಿ ಪರಿಣಾಮಕಾರಿ ಮೌಲ್ಯಮಾಪನ

**ಆಂಚಲ್ ಚೋಮಲ್**

ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕಲಿಕೆಯು ಸ್ಪಷ್ಟ ಉದ್ದೇಶ ಮತ್ತು ವಿವೇಚನೆಯನ್ನು ಹೊಂದಿರುವ ಅಭ್ಯಾಸವೆನ್ನಿಸುತ್ತದೆ. ತಮ್ಮ ಕಲಿಕೆಯ ಉದ್ದೇಶವನ್ನು ಸಾಧಿಸುವುದಕ್ಕಾಗಿ ಬೋಧಕರು ವಿವಿಧ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುತ್ತಾರೆ. ಇದರಲ್ಲಿ ಮುಖ್ಯವಾದುದು, ವಿದ್ಯಾರ್ಥಿಗಳು ತಮ್ಮನ್ನು ಅನುಸರಿಸುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ಮತ್ತು ವಿದ್ಯಾರ್ಥಿಗಳು ಕಲಿಯದೆ ಇದ್ದರೆ ತಾವು ಏನನ್ನಾದರೂ ಭಿನ್ನವಾಗಿ ಮಾಡಬೇಕಾದ ಅಗತ್ಯ ಇದೆಯೇ ಎಂಬುದನ್ನು ಕಂಡುಕೊಳ್ಳಲು ಬೋಧನೆಯ ವೇಳೆಯಲ್ಲಿ ವಿವಿಧ ಔಪಚಾರಿಕ ಮತ್ತು ಅನೌಪಚಾರಿಕ ವಿಧಾನಗಳನ್ನು ಸಂಯೋಜಿಸುವುದು. ಬೋಧನೆ – ಕಲಿಕೆಯ ಪ್ರಕ್ರಿಯೆಯ ವೇಳೆ ಈ ರೀತಿಯಲ್ಲಿ ಮೌಲ್ಯಮಾಪನವನ್ನು ಸಂಯೋಜಿಸುವ ಪ್ರಕ್ರಿಯೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020 ಇವೆರಡರಲ್ಲೂ ಮೌಲ್ಯಮಾಪನದ ಕೇಂದ್ರಬಿಂದು ಎಂದು ಕರೆಯಲಾಗಿದೆ. 'ಎನ್.ಸಿ.ಎಫ್– ಶಾಲಾ ಶಿಕ್ಷಣ'–ಇದರಲ್ಲಿ ಬಳಸಲಾದ ಒಂದು ವಾಕ್ಯವು, 'ಮೌಲ್ಯಮಾಪನಗಳು ರಚನಾತ್ಮಕ, ಅಭಿವೃದ್ಧಿಗೆ ಸಂಬಂಧಿಸಿದ ಮತ್ತು ಕಲಿಕೆಯನ್ನು ಕೇಂದ್ರೀಕರಿಸಿದ ವ್ಯವಸ್ಥೆಗಳಾಗಿರಬೇಕು' ಎಂದು ಹೇಳುತ್ತದೆ.

ಈ ಲೇಖನವು, ಮೌಲ್ಯಮಾಪನದ ಹಿನ್ನೆಲೆಯಲ್ಲಿ ರಚನಾತ್ಮಕ, ಅಭಿವೃದ್ಧಿಗೆ ಸಂಬಂಧಿಸಿದ ಮತ್ತು ಕಲಿಕೆಯನ್ನು ಕೇಂದ್ರೀಕರಿಸಿದ – ಎಂಬ ಮೂರು ವಿಚಾರಗಳ ಅರ್ಥವನ್ನು ಹೊರಗೆಡಹಲು ಮತ್ತು ವಿದ್ಯಾರ್ಥಿಗಳ ಕಲಿಕೆಯ ಬಲವರ್ಧನೆಗಾಗಿ ಇವುಗಳನ್ನು ಹೇಗೆ ಬಳಸಬಹುದು ಎಂಬ ಕುರಿತು ಗಮನಹರಿಸಲು ಪ್ರಯತ್ನಿಸುತ್ತದೆ.

## ಅವಲೋಕನ

ಮೌಲ್ಯಮಾಪನಗಳು ಅನೇಕ ಬಾರಿ ಒತ್ತಡ, ಭೀತಿ ಮತ್ತು ಆತಂಕದಂತಹ ವಿವಿಧ ರೀತಿಯ ಋಣಾತ್ಮಕ ಅರ್ಥದೊಂದಿಗೆ ಗುರುತಿಸಿಕೊಂಡಿವೆ. ಆದರೆ, ಮೌಲ್ಯಮಾಪನಗಳನ್ನು ಬೋಧನೆ –ಕಲಿಕೆ ಪ್ರಕ್ರಿಯೆಯ ವೇಳೆ ಅರ್ಥಪೂರ್ಣವಾಗಿ ಬಳಸಿಕೊಂಡಾಗ ಅವು ವಿದ್ಯಾರ್ಥಿಗಳ ಕಲಿಕೆ ಮತ್ತು ಬೋಧನಾ ಅಭ್ಯಾಸಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಲಿವೆ ಎಂದು ಕಳೆದ ಕೆಲವು ದಶಕಗಳಲ್ಲಿ ನಡೆದ ಸಂಶೋಧನೆಗಳು ಸಾಬೀತುಪಡಿಸಿವೆ. ನಾವು ಸಾಮಾನ್ಯವಾಗಿ ಇದನ್ನು ರಚನಾತ್ಮಕ ಮೌಲ್ಯಮಾಪನ ಅಥವಾ ಕಲಿಕೆಗಾಗಿ ನಡೆಸುವ ಮೌಲ್ಯಮಾಪನ ಎಂದು ಕರೆಯುತ್ತೇವೆ. ಎನ್. ಸಿ. ಎಫ್– ಎಸ್. ಇ 2023ರ ಪ್ರಕಾರ, ಮೌಲ್ಯ–ಮಾಪನವನ್ನು ನಿರಂತರ ಪ್ರಕ್ರಿಯೆಯಾಗಿ ಪರಿಗಣಿಸಬೇಕು ಹಾಗೂ ವಿದ್ಯಾರ್ಥಿಗಳ ಕಲಿಕೆಯ ಕುರಿತು ವಿಶ್ವಾಸಾರ್ಹ ಪುರಾವೆಯನ್ನು ಹೊರಸೆಳೆಯುವ ವಿವಿಧ ಔಪಚಾರಿಕ ಮತ್ತು ಅನೌಪಚಾರಿಕ ವಿಧಾನಗಳನ್ನು ಬಳಸಿ, ಬೋಧನೆ – ಕಲಿಕೆ ಪ್ರಕ್ರಿಯೆಯೊಳಗೆ ಶಿಕ್ಷಕರು ಇದನ್ನು ಸಂಯೋಜಿಸುತ್ತಾರೆ. ಅಂತಹ ಸಾಕ್ಷ್ಯವನ್ನು ಸಂಗ್ರಹಿಸುವುದರಿಂದ, ವಿದ್ಯಾರ್ಥಿಗಳು ಏನನ್ನು ಅರ್ಥ ಮಾಡಿಕೊಂಡಿದ್ದಾರೆ, ಮುಂದೆ ಯಾವುದರ ಕುರಿತು ಗಮನ ನೀಡಬೇಕು, ಯಾವ ಬೋಧನಾ ವಿಧಾನವು ಪರಿಣಾಮಕಾರಿಯಾಗಿರುತ್ತದೆ, ಯಾವ ರೀತಿಯ ಸಂಪನ್ಮೂಲಗಳು ಸಹಾಯ ಮಾಡುತ್ತವೆ, ಇತ್ಯಾದಿ ವಿಚಾರಗಳ ನೆಲೆಯಲ್ಲಿ ಅವರ ಶಿಕ್ಷಣ ಶಾಸ್ತ್ರದ ಪರಿಣಾಮಕಾರಿತ್ವವನ್ನು ಅರಿತುಕೊಳ್ಳಲು ಶಿಕ್ಷಕರಿಗೆ ಸಹಾಯವಾಗುತ್ತದೆ.

ಅಂತಹ ಸನ್ನಿವೇಶದಲ್ಲಿ, ವಿದ್ಯಾರ್ಥಿಯ ಕಲಿಕೆಯ ವಿಶ್ವಾಸಾರ್ಹ ಮೂಲವು ಯಾವುದು ಮತ್ತು ಶಿಕ್ಷಕರು ಅಂತಹ ಸಾಕ್ಷ್ಯವನ್ನು ಹೇಗೆ ಒಗ್ಗೂಡಿಸಬಹುದು ಎಂಬ ಕುರಿತು ಯೋಚಿಸುವುದು ಅಗತ್ಯ. ಜೊತೆಗೆ ವಿದ್ಯಾರ್ಥಿಗಳ ಕಲಿಕೆಯ ಬಲವರ್ಧನೆಗಾಗಿ ಅಂತಹ ಸಾಕ್ಷ್ಯಗಳನ್ನು ಅವರು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಚರ್ಚಿಸುವುದು ಸಹ ಪ್ರಮುಖವೆನ್ನಿಸುತ್ತದೆ.


## ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಎಂಬುದನ್ನು ನಾವು ಹೇಗೆ ಅರಿತುಕೊಳ್ಳುತ್ತೇವೆ?

ಶಾಲೆಯ ಚೌಕಟ್ಟಿನೊಳಗೆ ವಿದ್ಯಾರ್ಥಿಗಳು ವಿವಿಧ ರೀತಿಯಲ್ಲಿ ತಮ್ಮ ಜ್ಞಾನ, ಸಾಮರ್ಥ್ಯ, ಮೌಲ್ಯಗಳು ಮತ್ತು ಮನೋಧರ್ಮವನ್ನು ಪ್ರದರ್ಶಿಸುತ್ತಾರೆ. ಈ ಗೋಚರ/ ಸ್ಪಷ್ಟ ( ಮತ್ತು ಕೆಲವೊಮ್ಮೆ ಅಗೋಚರ / ಸೂಚ್ಯವಾದ) 'ಗುರುತು'ಗಳನ್ನು ಸಾಕ್ಷ್ಯವೆಂದು ಪರಿಗಣಿಸಲಾಗುತ್ತದೆ. ಇದು ವಿದ್ಯಾರ್ಥಿಗಳು ಸ್ವತಂತ್ರವಾಗಿ ಅಥವಾ ಸಹಯೋಗದಿಂದ ತಯಾರಿಸಿದ ಕಾರ್ಯಹಾಳೆಗಳು ಅಥವಾ ರೇಖಾಕೃತಿಯಂತಹ ಹಸ್ತಕೃತಿಗಳ ರೂಪದಲ್ಲಿರಬಹುದು; ತರಗತಿ ಕೆಲಸ ಅಥವಾ ಮನೆಗೆಲಸದ ನೋಟ್‌ಬುಕ್‌ನಲ್ಲಿ ಮಾಡಿದ ಕೆಲಸ, ಪ್ರಾಜೆಕ್ಟ್ ಅಥವಾ ಸಮೀಕ್ಷೆಯ ವರದಿಗಳು, ಉತ್ತರ ಪತ್ರಿಕೆಗಳು; ಅಥವಾ ತರಗತಿ, ಗುಂಪು ಕೆಲಸ, ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಕಾಣಿಸಿಕೊಳ್ಳುವ ಮಕ್ಕಳ ವರ್ತನೆಯ ರೂಪದಲ್ಲಿಯೂ ಆಗಿರಬಹುದು. ಅಂತಹ ಸಾಕ್ಷ್ಯವನ್ನು ಹೊರಗೆಳೆಯಲು ಔಪಚಾರಿಕ ಮತ್ತು ಅನೌಪಚಾರಿಕ; ರಚನಾತ್ಮಕ ಮತ್ತು ರಚನಾತ್ಮಕವಲ್ಲದ ವಿಧಾನದಲ್ಲಿ ಅವಕಾಶಗಳು ಲಭಿಸಬಹುದು. ಇದು ತರಗತಿಕೊಠಡಿಯ ಒಳಗೆ ಅಥವಾ ಹೊರಗೆ; ಕ್ರೀಡೆ ಮತ್ತು ಆಟಗಳ ಅವಧಿ/ ಸಭೆ/


ಮಧ್ಯಾಹ್ನದ ಬಿಸಿಯೂಟ/ ಮಧ್ಯಾಹ್ನದ ಊಟ/ ಉಪಾಹಾರದ ಬಿಡುವು ಇತ್ಯಾದಿ ಶಾಲಾ ವೇಳೆಯಲ್ಲಿಯೂ ಕಾಣಿಸಿ–ಕೊಳ್ಳಬಹುದು.

ವಿದ್ಯಾರ್ಥಿಗಳ ಕಲಿಕೆಯ ಕುರಿತು ಅಂತಹ ಸಾಕ್ಷ್ಯವನ್ನು ಸಂಗ್ರಹಿಸುವ ವಿಚಾರದಲ್ಲಿ ವೀಕ್ಷಣೆ ಅಥವಾ ಅವಲೋಕನವು ಸಹ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಯಾವುದನ್ನು ಅವಲೋಕಿಸಬೇಕು ಮತ್ತು ಆ ಅವಲೋಕನವನ್ನು ಬೋಧನೆಯಲ್ಲಿ ಹೇಗೆ ಬಳಸಿಕೊಳ್ಳಬೇಕು ಎಂಬುದರ ಕುರಿತು ಎಚ್ಚರಿಕೆ ವಹಿಸಬೇಕು. ಉದಾಹರಣೆಗೆ, ಭೂಗೋಳಶಾಸ್ತ್ರದ ತರಗತಿಯಲ್ಲಿ ವಿದ್ಯಾರ್ಥಿಗಳ ಅವಲೋಕನವನ್ನು ನಡೆಸುವಾಗ, ಭೂಪಟದಲ್ಲಿ ಪಟ್ಟಣಗಳು ಮತ್ತು ನಗರಗಳನ್ನು ಗುರುತಿಸಲು ಮತ್ತು ನಕಾಶೆಯನ್ನು ತಯಾರಿಸಲು ಶಿಕ್ಷಕರು ಅವರಿಗೆ ಕಾರ್ಯಹಾಳೆಯನ್ನು ನೀಡಬಹುದು. ಈ ರೀತಿಯ ಕಾರ್ಯಹಾಳೆಯನ್ನು ಬಿಡಿಸುವಾಗ ವಿದ್ಯಾರ್ಥಿಗಳು ಬೇರೆ ಬೇರೆ ವಿಧಾನಗಳನ್ನು ಬಳಸಬಹುದು. ಉದಾಹರಣೆಗೆ, ತಮ್ಮ ಸ್ಥಳಗಳನ್ನು ನಿಖರವಾಗಿ ಗುರುತಿಸುವುದಕ್ಕಾಗಿ ಕೆಲ ವಿದ್ಯಾರ್ಥಿಗಳು ಅಕ್ಷಾಂಶಗಳು ಮತ್ತು ರೇಖಾಂಶಗಳನ್ನು ಬಳಸಬಹುದು; ಇನ್ನು ಕೆಲವರು ಉಲ್ಲೇಖಕ್ಕಾಗಿ ಪಕ್ಕದ ಸ್ಥಳಗಳನ್ನು ಬಳಸಬಹುದು ಹಾಗೂ ಉಳಿದವರು ಈ ಗುರುತಿಸುವಿಕೆಗಾಗಿ ಇತರ ರೀತಿಯ ಲೆಕ್ಕಾಚಾರವನ್ನು ಬಳಸಬಹುದು.

ವಿದ್ಯಾರ್ಥಿಗಳ ಅವಲೋಕನವನ್ನು ಮಾಡುವಾಗ, ಯಾವ ರೀತಿಯ ವಿವಿಧ ಕಾರ್ಯತಂತ್ರಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬಹುದು ಎಂಬುದರ ಕುರಿತು ಶಿಕ್ಷಕರು ಅಗತ್ಯವಾಗಿ ತಿಳಿದಿರಬೇಕು ಮತ್ತು ಈ ವಿವರಗಳನ್ನು ಮನಸ್ಸಿನಲ್ಲಿ ದಾಖಲಿಸಿಕೊಳ್ಳಬೇಕು. ಈ ಚಟುವಟಿಕೆಯ ವೇಳೆ ಶಿಕ್ಷಕರು ಸಹಜ ವಿರಾಮವನ್ನು ತೆಗೆದುಕೊಂಡು ಸಂದೇಹವನ್ನು ಬಗೆಹರಿಸಲು ವಿದ್ಯಾರ್ಥಿಗಳಿಗೆ ಹೇಳಬಹುದು. ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳ ಗುಣಸ್ವರೂಪವು, ಭೂಪಟಕ್ಕೆ ಸಂಬಂಧಿಸಿದ ಕಾರ್ಯವನ್ನು ಮಾಡುವಾಗ ಯಾವ ರೀತಿಯ ಸಮಸ್ಯೆಗಳು ಅಥವಾ ಗೊಂದಲಗಳನ್ನು ವಿದ್ಯಾರ್ಥಿಗಳು ಎದುರಿಸುತ್ತಿದ್ದಾರೆ ಎಂಬುದನ್ನು ಅರಿತುಕೊಳ್ಳಲು ಸಹಾಯ ಮಾಡಲಿದೆ ಮಾತ್ರವಲ್ಲದೆ ಈ ಚಟುವಟಿಕೆಯು ನಡೆಯುತ್ತಿರುವ ಸಂದರ್ಭದಲ್ಲಿಯೇ ಕಲಿಕೆಯ ಬಲವರ್ಧನೆಯನ್ನು ಮಾಡಲು ಅವರಿಗೆ ಅನುವು ಮಾಡಿಕೊಡಲಿದೆ.




**ಚಿತ್ರ 1: ಬಲವರ್ಧನೆಯನ್ನು ವಿನ್ಯಾಸಗೊಳಿಸುವುದಕ್ಕಾಗಿ ವಿದ್ಯಾರ್ಥಿಯ ಕಲಿಕೆಯ ವಿವಿಧ ಸಾಕ್ಷ್ಯ ಪ್ರಕಾರಗಳನ್ನು ಶಿಕ್ಷಕರು ಪರಿಶೀಲಿಸಬೇಕು.**




ಚಿತ್ರ 2: ವಿದ್ಯಾರ್ಥಿಯ ಕಲಿಕೆಯ ಸಾಕ್ಷ್ಯವನ್ನು ಅವಲೋಕಿಸಲು ಮತ್ತು ಸಂಗ್ರಹಿಸಲು ಸಿಗುವ ಸ್ಥಳ ಅವಕಾಶಗಳು

## ವಿಶ್ವಾಸಾರ್ಹ ಮೌಲ್ಯಮಾಪನದ ಗುಣಲಕ್ಷಣಗಳು:

## ಮೌಲ್ಯಮಾಪನವು ರಚನಾತ್ಮಕವಾಗಿರಬೇಕು


ವಿದ್ಯಾರ್ಥಿಗಳು ತರಗತಿಯಲ್ಲಿ ಬರೆವಣಿಗೆಯ ಕೆಲಸವನ್ನು ಮಾಡುವಾಗ ಅವರು ಪರಿಕಲ್ಪನೆಗಳ ಕಲಿಕೆ, ತಮ್ಮ ಸಾಮರ್ಥ್ಯ ಹಾಗೂ ಕೆಲವೊಮ್ಮೆ ಆಸಕ್ತಿಗಳನ್ನು ಸಹ ಪ್ರದರ್ಶಿಸುತ್ತಾರೆ. ಮೌಲ್ಯಮಾಪನವು ರಚನಾತ್ಮಕವಾಗಿರಬೇಕಾದರೆ ಶಿಕ್ಷಕರು ವಿದ್ಯಾರ್ಥಿಯ ಕಲಿಕೆಗೆ ಚೌಕಟ್ಟನ್ನು ಒದಗಿಸಲು ನೆರವಾಗಬೇಕು. ಇದನ್ನು ಇನ್ನಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದಕ್ಕಾಗಿ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ

ಈ ಕೆಲಸದಲ್ಲಿ ವಿದ್ಯಾರ್ಥಿಗೆ ಯಾವುದಾದರೂ ಚಿತ್ರವನ್ನು ಬಿಡಿಸಿ ವಿವಿಧ ವಾಕ್ಯಗಳಲ್ಲಿ ವಿವರಿಸಲು ಹೇಳಲಾಗಿದೆ. ಇಲ್ಲಿ ವಿಶ್ಲೇಷಿಸಬೇಕಾದ ಅತ್ಯಂತ ಪ್ರಮುಖ ಸಂಗತಿ ಎಂದರೆ, ಸೂಚಿಸಿದ ಫಲಿತಾಂಶ ಮತ್ತು ಗುರಿಗಳಿಗೆ ಪ್ರತಿಯಾಗಿ ವಿದ್ಯಾರ್ಥಿಯು ಮಾಡಿರುವ ಕೆಲಸವನ್ನು ವಿಶ್ಲೇಷಿಸುವುದು. ಕೆಳಗಿನ ಫಲಿತಾಂಶಗಳಿಗೆ ಪ್ರತಿಯಾಗಿ ಈ ಕೆಲಸವನ್ನು ವಿಶ್ಲೇಷಿಸಲಾಗಿದೆ:

ಕಲಿಕಾ ಫಲ 1 (LO1): ಸರಳವಾದ ಮತ್ತು ಚುಟುಕಾದ ವಾಕ್ಯಗಳನ್ನು ರಚಿಸಿ ಬರೆಯುತ್ತಾನೆ.

ಕಲಿಕಾ ಫಲ 2 (LO2): ಲಿಂಗಕ್ಕೆ ಸಂಬಂಧಿಸಿದ his/ her/, he/she, ಅದು ಮುಂತಾದ ಸರ್ವನಾಮಗಳು ಮಾತ್ರವಲ್ಲದೆ this / that, here / there, these / those ಮುಂತಾದ ಇತರ ಸರ್ವನಾಮಗಳನ್ನು ಸಹ ಬಳಸುತ್ತಾನೆ.

ಈ ಸಾಕ್ಷ್ಯವು ವಿದ್ಯಾರ್ಥಿಯ ಕುರಿತು ಏನನ್ನು ಹೇಳುತ್ತದೆ? ಈ ಉದಾಹರಣೆಯಿಂದ, ಕೆಲವೊಂದು ತಪ್ಪುಗಳು ಉಂಟಾಗಿದ್ದರೂ, ಸುಸಂಬದ್ಧ, ಅರ್ಥಪೂರ್ಣ ಮತ್ತು ಅಭಿವ್ಯಕ್ತ ವಾಕ್ಯಗಳನ್ನು ರಚಿಸುವ ಸಾಮರ್ಥ್ಯವು ಆ ಮಗುವಿಗೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಈ ವಾಕ್ಯಗಳು ಪದಗಳ ನಡುವೆ ಅಂತರವನ್ನು ಹೊಂದಿದ್ದು, ದೊಡ್ಡಕ್ಷರದೊಂದಿಗೆ ಪ್ರಾರಂಭಗೊಂಡು ಪೂರ್ಣವಿರಾಮದೊಂದಿಗೆ ಕೊನೆಗೊಳ್ಳುತ್ತವೆ. ಮಗುವು ವಾಕ್ಯದಲ್ಲಿ I ಮತ್ತು this ಎಂಬುದನ್ನು ಸರಿಯಾಗಿ ಬಳಸಿದೆ ಮತ್ತು ಮೂರನೇ ವಾಕ್ಯದಲ್ಲಿ ಉಪಸರ್ಗವನ್ನು ತಪ್ಪಾಗಿ ಬಳಸಲಾಗಿದೆ. ಇಲ್ಲಿ ಮಗುವು season ಎಂಬುದಕ್ಕೆ ತಾನೇ ಕಂಡುಹಿಡಿದ ಅಕ್ಷರಗಳನ್ನು ಬಳಸಿದೆ ಹಾಗೂ a ಮತ್ತು an ಮುಂತಾದ ಗುಣವಾಚಕಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ಅದಕ್ಕೆ ಸಾಧ್ಯವಾಗಿಲ್ಲ.ಇಂತಹ ಪುರಾವೆಗಳನ್ನು ಆಧರಿಸಿ ನಿರ್ಧಾರಕ್ಕೆ ಬರಬಹುದಾದ ಇನ್ನೂ ಹಲವು ವಿಚಾರಗಳಿರಬಹುದು. ಈ ಸಾಕ್ಷ್ಯವನ್ನು ಆಧರಿಸಿ ಮಗುವಿನೊಂದಿಗೆ ಕೆಲಸ ಮಾಡುವುದು ಮುಂದಿನ ತಾರ್ಕಿಕ ಹಂತವಾಗಿದೆ. ಶಿಕ್ಷಕರು ಈ ಕೆಳಗಿನಂತಹ ಕೆಲವು ಸರಳ ಕ್ರಮಗಳನ್ನು ಅನುಸರಿಸಬಹುದು:




**ಚಿತ್ರ 3:**

- ವಿದ್ಯಾರ್ಥಿಗೆ ಅಂಕಿತನಾಮ ಮತ್ತು ರೂಢನಾಮದ ನಡುವೆ ಸ್ಥಿರವಾದ ಅರಿವಿದೆಯೇ ಎಂಬುದರ ಮೌಲ್ಯಮಾಪನವನ್ನು ಮಾಡುವುದಕ್ಕಾಗಿ ಹಾಗೂ ಅಂಕಿತನಾಮ ಮತ್ತು ರೂಢನಾಮಗಳನ್ನು ಬಳಸುವಾಗ ದೊಡ್ಡ ಅಕ್ಷರವನ್ನು ಬರೆಯುವುದಕ್ಕಾಗಿ ಯಾವ ನಿಯಮಗಳನ್ನು ಅನುಸರಿಸಬೇಕು ಎಂಬುದನ್ನು ವಿದ್ಯಾರ್ಥಿಯು ಅರಿತುಕೊಂಡಿದ್ದಾನೆಯೇ ಎಂಬುದನ್ನು ನೋಡಲು ಆತನ ನೋಟ್‌ಪುಸ್ತಕದ ಮೇಲೆ ಕಣ್ಣಾಡಿಸಿರಿ.

- ಮೌಖಿಕವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಉತ್ತೇಜಿಸುವುದಕ್ಕಾಗಿ ಕೆಲವೊಂದು ಸಚಿತ್ರ ಪುಸ್ತಕಗಳನ್ನು ಬಳಸಿ. ನಂತರ ಇದನ್ನು ನೋಟ್‌ಪುಸ್ತಕದಲ್ಲಿ ಬರೆಯಲು ಶಿಕ್ಷಕರು ವಿದ್ಯಾರ್ಥಿಗೆ ಹೇಳಬಹುದು ಮತ್ತು ಅಗತ್ಯವೆನಿಸಿದಾಗ ಬೇಕಾದ ನೆರವನ್ನು ಒದಗಿಸಬಹುದು.

- a, an ಮತ್ತು the ಮುಂತಾದ ಗುಣವಾಚಕಗಳ ಸರಿಯಾದ ಬಳಕೆಯ ನಿಯಮಗಳನ್ನು ಅರಿತುಕೊಳ್ಳುವುದಕ್ಕಾಗಿ ನಿರ್ದಿಷ್ಟ ಉದಾಹರಣೆಗಳನ್ನು ಚರ್ಚಿಸಿರಿ.

- ವಿದ್ಯಾರ್ಥಿಯ ಕೆಲಸವನ್ನು ಆಧರಿಸಿ, ಯಾವುದನ್ನು ಆತ ಚೆನ್ನಾಗಿ ನಿರ್ವಹಿಸಿದ್ದಾನೆ ಮತ್ತು ಯಾವ ವಿಷಯದಲ್ಲಿ ಇನ್ನಷ್ಟು ಸುಧಾರಣೆಯ ಅಗತ್ಯವಿದೆ ಎಂಬ ಕುರಿತು ಒಂದಷ್ಟು ಸರಳ ಪ್ರತಿಕ್ರಿಯೆಯನ್ನು ನೀಡಿರಿ. ಮೇಲೆ ತಿಳಿಸಿದ ಈ ಕ್ರಮಗಳನ್ನು, ವಿಶ್ಲೇಷಣೆ ಮತ್ತು ವ್ಯಾಖ್ಯಾನ ಹಾಗೂ ಸಾಕ್ಷ್ಯವನ್ನು ಆಧರಿಸಿ ಕಾರ್ಯ ನಿರ್ವಹಿಸುವುದು ಎಂದು ಕರೆಯಲಾಗುತ್ತದೆ. ಪ್ರತಿಯೊಂದು ಚಟುವಟಿಕೆಯ ಸಂದರ್ಭದಲ್ಲಿಯೂ ಅಥವಾ ಪ್ರತಿ ವಿದ್ಯಾರ್ಥಿಯೂ ಮಾಡಿರುವ ಕೆಲಸದ ಮೇಲೆ ಈ ಕ್ರಿಯೆಯನ್ನು ನಡೆಸುವುದು ಶಿಕ್ಷಕರಿಗೆ ಸಾಧ್ಯವಿಲ್ಲ ಎಂಬುದನ್ನು ಅರಿತುಕೊಳ್ಳಬೇಕು. ಆದರೆ ಶಿಕ್ಷಕರು ಈ ರೀತಿಯ ವಿಶ್ಲೇಷಣೆಯನ್ನು ಕಾಲಕಾಲಕ್ಕೆ ಮಾಡಲು ಸಾಧ್ಯವಾದರೆ, ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯಗಳ ಕುರಿತು ಅಗತ್ಯ ಮಾಹಿತಿಯನ್ನು ಪಡೆಯಲು ಅವರಿಗೆ ಸಾಧ್ಯವಾಗಲಿದೆ. ಜೊತೆಗೆ ಬೋಧನೆ – ಕಲಿಕೆ ಪ್ರಕ್ರಿಯೆಗೆ ಒಳ್ಳೆಯ ಚೌಕಟ್ಟನ್ನು ಒದಗಿಸಲು ಸಾಧ್ಯವಾಗಲಿದ್ದು ಸರಿಯಾದ ವ್ಯಾಕರಣದ ಬಳಕೆಯ ಬಲವರ್ಧನೆಯಾಗಲಿದೆ.

ವಿಶ್ಲೇಷಣೆ ಮತ್ತು ವ್ಯಾಖ್ಯಾನ ಹಾಗೂ ದೊರೆತ ಸಾಕ್ಷ್ಯಗಳ ಮೇಲೆ ಕ್ರಮ ಜರುಗಿಸುವುದಕ್ಕಾಗಿ ಅನುಸರಿಸಬೇಕಾದ ಸರಳ ಪರಿಶೀಲನ ಪಟ್ಟಿಯು ಈ ಕೆಳಗಿನವುಗಳನ್ನು ಒಳಗೊಂಡಿರಬಹುದು:

- ಈ ಸಾಕ್ಷ್ಯವು ಕಲಿಕೆಯ ಮಟ್ಟಿಗೆ ನನಗೆ ಏನನ್ನು ಹೇಳುತ್ತದೆ?
- ವಿದ್ಯಾರ್ಥಿಗೆ ಏನೆಲ್ಲ ತಿಳಿದಿದೆ? ಯಾವುದಾದರೂ ತಪ್ಪು ಗ್ರಹಿಕೆಗಳಿವೆಯೇ?

- ಬೇರೆ ಬೇರೆ ಸಾಕ್ಷ್ಯಗಳು ಒಂದೇ ರೀತಿಯ ತೀರ್ಮಾನವನ್ನು ನೀಡುತ್ತಿವೆಯೇ?
- ನನ್ನ ಮುಂದಿನ ಬಲವರ್ಧನೆಯ ಕ್ರಮಗಳು ಯಾವುವು?

## ಮೌಲ್ಯಮಾಪನವು ಬೆಳವಣಿಗೆಗೆ ಸಂಬಂಧಿಸಿರಬೇಕು

ಶಿಕ್ಷಕರು ವಿದ್ಯಾರ್ಥಿಯ ಕಲಿಕೆಗೆ ಚೌಕಟ್ಟನ್ನು ಒದಗಿಸಲು ತನ್ನೆಲ್ಲ ಪ್ರಯತ್ನಗಳನ್ನು ಮಾಡಿದರೂ, ಎಲ್ಲರಿಗೂ ಸರಿಹೊಂದುವ ಒಂದೇ ಸಿದ್ಧ ಸೂತ್ರವು ಯಾವಾಗಲೂ ಒಂದೇ ರೀತಿಯಾಗಿ ಕೆಲಸ ಮಾಡದೆ ಇರಬಹುದು ಎಂಬುದನ್ನು ತಿಳಿದಿರಬೇಕು. ತರಗತಿಯಲ್ಲಿ ಬೇರೆಬೇರೆ ಕಲಿಕಾ ಮಟ್ಟಗಳನ್ನು ಹೊಂದಿರುವ ವಿದ್ಯಾರ್ಥಿಗಳಿರಬಹುದು. ಕೆಲವರಿಗೆ ಏನನ್ನೂ ಬರೆಯಲು ಸಾಧ್ಯವಾಗದಿರಬಹುದು, ಇನ್ನು ಕೆಲವರು ಅಪೂರ್ಣ ವಾಕ್ಯಗಳನ್ನು ಬರೆಯಬಹುದು. ಉಳಿದವರು ಹೆಚ್ಚು ಕ್ಲಿಷ್ಟಕರವಾದ ಪದಗಳನ್ನು ಬಳಸಿ ಸಂಕೀರ್ಣ ವಾಕ್ಯಗಳನ್ನು ರಚಿಸಬಹುದು. ಒಂದೇ ಸಾಮರ್ಥ್ಯಕ್ಕೆ ವಿದ್ಯಾರ್ಥಿಗಳು ಬೇರೆಬೇರೆ ಮಟ್ಟಗಳ ಸಾಮರ್ಥ್ಯವನ್ನು ತೋರಿಸುವ ಸಾಧ್ಯತೆ ಇದೆ ಎಂಬುದನ್ನು ಶಿಕ್ಷಕರು ಅರಿತುಕೊಳ್ಳುವುದು ಅಗತ್ಯ. ಇಂತಹ ಸಂದರ್ಭಗಳಲ್ಲಿ, ವಿದ್ಯಾರ್ಥಿಗಳ ಕುಶಲತೆಯ ಅನುಕ್ರಮ ಮಟ್ಟಗಳನ್ನು ಅನುಸರಿಸಿ ಅವರು ತಮ್ಮ ಸಾಮರ್ಥ್ಯವನ್ನು ತೋರಿಸಲು ನೆರವಾಗಲು ಮೌಲ್ಯಮಾಪನದಲ್ಲಿ ಭಿನ್ನತೆಯನ್ನು ಕಾಪಾಡಬೇಕು. ಶಿಕ್ಷಕರ ಪಾಲಿಗೆ ಇದು ಅತಿ ಎನಿಸಿದರೂ, ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ, ಯಾವುದೇ ಭಾಷಾ ಶಿಕ್ಷಕರು ತನ್ನ ವಿದ್ಯಾರ್ಥಿಗಳಲ್ಲಿ ಅಭಿವೃದ್ಧಿಪಡಿಸಬೇಕಾದ ಎರಡು ಅತ್ಯಂತ ಮುಖ್ಯ ಮೂಲಭೂತ ಸಾಮರ್ಥ್ಯಗಳೆಂದರೆ ವಯಸ್ಸು ಮತ್ತು ಹಂತಕ್ಕೆ ಸೂಕ್ತವೆನಿಸುವ ಮಟ್ಟಗಳಲ್ಲಿ ಓದುವುದು ಮತ್ತು ಬರೆಯುವುದನ್ನು ಬೆಳೆಸುವುದು. ತನ್ನ ತರಗತಿಯಲ್ಲಿ ವಿವಿಧ ರೀತಿಯ ವಿದ್ಯಾರ್ಥಿಗಳಿಗೆ ತಕ್ಕಂತೆ ಬೇರೆಬೇರೆ ಕಾರ್ಯ–ಹಾಳೆಗಳು ಅಥವಾ ಕಾರ್ಯಗಳನ್ನು ವಿನ್ಯಾಸಗೊಳಿಸಲು ಅಥವಾ ವ್ಯವಸ್ಥೆಗೊಳಿಸಲು ಸಾಧ್ಯವಾದರೆ, ಭೇದ ಗ್ರಹಿಸುವ ಅಂತಹ ಮೌಲ್ಯಮಾಪನಗಳನ್ನು ಮಾಡಲು ಅವರಿಗೆ ಸಾಧ್ಯವಾಗುತ್ತದೆ. ಏಕೆಂದರೆ ಆಗ ಅವರಿಗೆ ವಿದ್ಯಾರ್ಥಿಯ ಕಲಿಕೆಯ ಮಟ್ಟದ ಕುರಿತು ಹೆಚ್ಚು ವಿಶ್ವಾಸಾರ್ಹ ಸಾಕ್ಷ್ಯವನ್ನು ಕಲೆ ಹಾಕಲು ಮತ್ತು ಪರಿಣಾಮಕಾರಿಯಾಗಿ ಬಲವರ್ಧನೆ ಮಾಡಲು ಸಾಧ್ಯವಾಗುತ್ತದೆ. ಜೊತೆಗೆ ಕಲಿಕೆಯ ಪ್ರಕ್ರಿಯೆಯಲ್ಲಿ ಯಾವುದೇ ಮಗುವು ಹಿಂದೆ ಬೀಳದಂತೆ ನೋಡಿಕೊಂಡು ತನ್ನ ತರಗತಿಯಲ್ಲಿ ಕಲಿಕಾ ವೈವಿಧ್ಯವನ್ನು ನಿಭಾಯಿಸಲು ಶಿಕ್ಷಕರಿಗೆ ಸಾಧ್ಯವಾಗುತ್ತದೆ. ಮೌಲ್ಯಮಾಪನದ ಈ ದೃಷ್ಟಿಕೋನವು, ಅವರನ್ನು ಹೆಚ್ಚು ನ್ಯಾಯಯುತ ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೆ ಸುಲಭವಾಗಿ ಲಭ್ಯ ವ್ಯಕ್ತಿಗಳಾಗಿ ರೂಪಿಸುತ್ತದೆ. ತರಗತಿಯ ಎಲ್ಲಾ ವಿದ್ಯಾರ್ಥಿಗಳು ಕನಿಷ್ಠ ಕೆಲವು ವಾಕ್ಯಗಳನ್ನಾದರೂ ಸ್ವತಂತ್ರವಾಗಿ ಬರೆಯಲು ಕಲಿತಿದ್ದಾರೆ ಎಂಬ ಕುರಿತು ಶಿಕ್ಷಕರಿಗೆ ಭರವಸೆ ಮೂಡಿದ ನಂತರ, ಇಡೀ ತರಗತಿಗಾಗಿ ಅವರು ಬರವಣಿಗೆಯ ಕಾರ್ಯದ ಸಂಕೀರ್ಣತೆಯ ಮಟ್ಟವನ್ನು ವರ್ಧಿಸಬಹುದು. ಮೌಲ್ಯ ಮಾಪನವು ಕಲಿಕೆಗೆ ಗಮನ ನೀಡಬೇಕು

ಮೇಲೆ ಸೂಚಿಸಿದ ಮೌಲ್ಯಮಾಪನದ ಎಲ್ಲಾ ವಿಧಾನಗಳು ಕಲಿಕೆಯ ಮೇಲೆ ಕೇಂದ್ರೀಕೃತಗೊಂಡಿದ್ದರೂ ಸಹ, ಕಳೆದ ಸುಮಾರು ಒಂದು ದಶಕದಲ್ಲಿ, ಕಲಿಕೆಯಾಗಿ ಮೌಲ್ಯಮಾಪನದ ವಿಧಾನವು ಜನಪ್ರಿಯತೆಯನ್ನು ಗಳಿಸಿದೆ. ಈ ವಿಧಾನದಲ್ಲಿ, ವಿದ್ಯಾರ್ಥಿಯು ತನ್ನ ಹಿಂದಿನ ಕ್ಷಮತೆ ಅಥವಾ ಸಾಧನೆಗೆ ಪ್ರತಿಯಾಗಿ ಸ್ವಯಂ ಮೌಲ್ಯಮಾಪನವನ್ನು ನಡೆಸುತ್ತಾನೆ. ಇಲ್ಲಿ ಇತರ ವಿದ್ಯಾರ್ಥಿಗಳೊಂದಿಗೆ ಯಾವುದೇ ಹೋಲಿಕೆ ನಡೆಯುವುದಿಲ್ಲ. ಪ್ರತಿ ವಿದ್ಯಾರ್ಥಿಯೂ ತನ್ನದೇ ಆದ ಮೈಲಿಗಲ್ಲನ್ನು ನಿಗದಿಪಡಿಸುತ್ತಾನೆ ಮತ್ತು ಇದಕ್ಕೆ ಪ್ರತಿಯಾಗಿ ತನ್ನ ಪ್ರಗತಿಯನ್ನು ಗುರುತಿಸುತ್ತಾನೆ. ಇದು ವಿದ್ಯಾರ್ಥಿಗಳನ್ನು ಹೆಚ್ಚು ಸ್ವಾವಲಂಬಿಗಳನ್ನಾಗಿಸುತ್ತದೆ. ಏಕೆಂದರೆ ತಮ್ಮ ಸ್ವಂತ ಬಲ ಮತ್ತು ದೌರ್ಬಲ್ಯಗಳನ್ನು ಅವರು ಅಳೆಯಬಲ್ಲರು ಮಾತ್ರವಲ್ಲದೆ ಪರ್ಯಾಲೋಚನೆಯನ್ನೂ ನಡೆಸಬಲ್ಲರು. ಇಲ್ಲಿ ಮೌಲ್ಯಮಾಪನವು ಕಲಿಕೆಗೆ ಪರ್ಯಾಯವೆನ್ನಿಸುತ್ತದೆ ಮತ್ತು ಸ್ವಯಂ ಪರ್ಯಾಲೋಚನೆ ಮತ್ತು ಆತ್ಮವಿಕಾಸಕ್ಕೆ ಕಾರಣವೆನ್ನಿಸುತ್ತದೆ. ಕಲಿಕೆಯಾಗಿ ಬಳಸುವ ಮೌಲ್ಯಮಾಪನವು ಶಿಕ್ಷಕರ ಪಾಲಿಗೂ ಅಗತ್ಯ ಮಾತ್ರವಲ್ಲದೆ ಪ್ರಸ್ತುತ ಕೂಡಾ. ತಮ್ಮ ಕಾರ್ಯತಂತ್ರಗಳು ಯಾವ ಮಟ್ಟಿಗೆ ವಿದ್ಯಾರ್ಥಿಗಳ ಕಲಿಕೆಗೆ ಕಾರಣವೆನ್ನಿಸಿವೆ ಎಂಬುದರ ಮೌಲ್ಯಮಾಪನವನ್ನು ನಡೆಸಲು ಇದು ಸಹಾಯ ಮಾಡುತ್ತದೆ. ವಿದ್ಯಾರ್ಥಿಯ ಕಲಿಕೆ ಮತ್ತು ಬೋಧನಾ ಅಭ್ಯಾಸಗಳ ಈ ನಿರಂತರ ಗುರುತಿಸುವಿಕೆಯು ಎಲ್ಲಿ ಮತ್ತು ಯಾವ ಮಟ್ಟದಲ್ಲಿ ಬಲವರ್ಧನೆಯ ಅಗತ್ಯವಿದೆ ಎಂಬುದನ್ನು ಶಿಕ್ಷಕರು ಅರಿತುಕೊಳ್ಳಲು ಸಹಾಯ ಮಾಡುತ್ತದೆ.

## ಉಪಸಂಹಾರ

ಮೇಲಿನ ಎಲ್ಲಾ ಅಭ್ಯಾಸಗಳಲ್ಲಿ, ಕಲಿಕೆಯ ಮಾನದಂಡಗಳ ಸಮಗ್ರ ಅರಿವನ್ನು ಶಿಕ್ಷಕರು ಪಡೆದುಕೊಳ್ಳುವುದು ಅಗತ್ಯ. ವಿದ್ಯಾರ್ಥಿಯ ಕಲಿಕೆಯ ಬಲವರ್ಧನೆಗಾಗಿ ಮಾಡುವ ಯಾವುದೇ ರೀತಿಯ ಮೌಲ್ಯಮಾಪನವು ಪಠ್ಯಕ್ರಮದ ಗುರಿಗಳು, ಸಾಮರ್ಥ್ಯಗಳು ಮತ್ತು ವಿಷಯದ ಕಲಿಕೆಯ ಫಲಿತಾಂಶಗಳಲ್ಲಿ ನೆಲೆಗೊಂಡಿರ–ಬೇಕು. ಪಠ್ಯಪುಸ್ತಕಗಳಲ್ಲಿ ಬಳಸುವ ವಿಷಯವು ಕಲಿಕಾರ್ಥಿಯ ಜ್ಞಾನ, ಸಾಮರ್ಥ್ಯಗಳು, ಮೌಲ್ಯಗಳು ಮತ್ತು ಮನೋ– ಧರ್ಮವನ್ನು ಅಭಿವೃದ್ಧಿಪಡಿಸುವುದಕ್ಕಾಗಿಯೇ ಬಳಸಲಾಗುತ್ತದೆ ಎಂಬುದನ್ನು ಗಮನದಲ್ಲಿಡಬೇಕಾದ ಅಗತ್ಯವಿದೆ. ವಿದ್ಯಾರ್ಥಿಗಳ ಮಟ್ಟ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ವಿಷಯವನ್ನು ಅಣಿಗೊಳಿಸುವುದು ಅಗತ್ಯ. ತನ್ನ ತರಗತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂಬಂಧ ಕಲ್ಪಿಸಬಹುದಾದ ಉದಾಹರಣೆಗಳು ಮತ್ತು ಪ್ರಸಂಗಗಳನ್ನು ಬಳಸಿ ಶಿಕ್ಷಕರು ಪರಿಕಲ್ಪನೆಯನ್ನು ಪರಿಚಯಿಸಬೇಕು ಮತ್ತು ರೂಪಿಸಬೇಕು. ಹೆಚ್ಚಾಗಿ ವರ್ಷದ ಆರಂಭದಲ್ಲಿ ಶಿಕ್ಷಕರಿಗೆ ಈ ಕುರಿತು ಸಂಪೂರ್ಣ ಅರಿವು ಇರುವುದಿಲ್ಲ. ಆದರೆ ನಿರಂತರ ಸಂವಾದ ಮತ್ತು ಚರ್ಚೆಗಳು, ವಿದ್ಯಾರ್ಥಿಗಳನ್ನು ಚೆನ್ನಾಗಿ ಅರಿತುಕೊಳ್ಳಲು ಮತ್ತು ಅವರ ಸಾಮರ್ಥ್ಯ ಹಾಗೂ ಆಸಕ್ತಿಗೆ ತಕ್ಕುದಾಗಿ ವಿಷಯವನ್ನು ಅಣಿಗೊಳಿಸಲು ಸಹಾಯ

ಮಾಡುತ್ತದೆ.

ವಿದ್ಯಾರ್ಥಿಯ ಕಲಿಕೆಯ ಬಲವರ್ಧನೆಯು, ಶಿಕ್ಷಕರು ಅಳವಡಿಸಿಕೊಳ್ಳುವ ಕಾರ್ಯತಂತ್ರ ಮಾತ್ರವಲ್ಲದೆ ಕಾಲಕ್ರಮೇಣ ರೂಪಿಸಿಕೊಳ್ಳುವ ತರಗತಿ ವಾತಾವರಣವನ್ನು ಸಹ ಹೊಂದಿಕೊಂಡಿದೆ. ತಮ್ಮ ಸಂದೇಹವನ್ನು ನಿವಾರಿಸಲು, ಪ್ರಶ್ನೆಗಳನ್ನು ಕೇಳಲು, ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಹಾಗೂ ಒತ್ತಡರಹಿತ ಮತ್ತು ವಿಮರ್ಶೆಗೆ ಒಳಪಡದ ಪರಿಸರದಲ್ಲಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ಶಕ್ತಿ ಒದಗಿಸುವ ತರಗತಿ ಸಂಸ್ಕೃತಿಯು ಮೌಲ್ಯಮಾಪನದ ಒತ್ತಡವನ್ನು ನಿವಾರಿಸುವಲ್ಲಿ ಮತ್ತು ಜೀವನಪರ್ಯಂತ ನಡೆಯುವ ಕಲಿಕೆಯನ್ನು ಪೋಷಿಸುವಲ್ಲಿ ಗಮನಾರ್ಹ ಕೆಲಸವನ್ನು ಮಾಡಲಿದೆ.


**ಕೃತಜ್ಞತೆಗಳು**

ಈ ಲೇಖನಕ್ಕೆ ಪ್ರಣಾಲಿ ಶರ್ಮ ಮತ್ತು ಪೂಜಾ ಆರ್ಯ ಅವರು ನೀಡಿದ ಕೊಡುಗೆಯನ್ನು ಲೇಖಕರು ಇಲ್ಲಿ ಸ್ಮರಿಸಲು ಇಚ್ಛಿಸುತ್ತಾರೆ.





**ಆಂಚಲ್ ಚೋಮಲ್** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಬೋಧನ ಸಿಬ್ಬಂದಿಯಾಗಿದ್ದಾರೆ. ಅವರು ಬೃಹತ್‌ಮಟ್ಟದ ಮೌಲ್ಯಮಾಪನಗಳು, ಸಿ.ಸಿ.ಇ, ಸಮಾಜೋ–ಭಾವನಾತ್ಮಕ ಮೌಲ್ಯಮಾಪನಗಳು, ಮಂಡಳಿ ಪರೀಕ್ಷೆ ಸುಧಾರಣೆಗಳು ಮತ್ತು ಟಿ.ಇ.ಟಿ ಸುಧಾರಣೆಗಳಿಗಾಗಿ ಚೌಕಟ್ಟುಗಳು, ಸಾಧನಗಳು ಮತ್ತು ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಅವರು ಪಠ್ಯಕ್ರಮ, ಶಿಕ್ಷಣಶಾಸ್ತ್ರ, ಮತ್ತು ಬೋಧನೆ – ಕಲಿಕೆ ಸಾಧನಗಳ ಅಭಿವೃದ್ಧಿಯಲ್ಲಿ ವಿವಿಧ ಸುಧಾರಣೆಗಳನ್ನು ತರುವುದಕ್ಕಾಗಿ ವಿವಿಧ ರಾಜ್ಯ ಸರ್ಕಾರಗಳೊಂದಿಗೆ ಕೆಲಸ ಮಾಡಿದ್ದಾರೆ. ಅವರು ಭಾರತದಾದ್ಯಂತ ಶಿಕ್ಷಕರು, ಶಿಕ್ಷಕ ಬೋಧಕರು, ಹಿರಿಯ ಕಾರ್ಯನಿರ್ವಾಹಕರು, ಮತ್ತು ಎನ್.ಜಿ.ಒ ವೃತ್ತಿಪರರಿಗಾಗಿ ನಿರಂತರ ಶಿಕ್ಷಣ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸುವ ಮತ್ತು ಒದಗಿಸುವ ಕಾರ್ಯದಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಅವರನ್ನು aanchal@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** | ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**


ಸಂಗೀತವು ನಮ್ಮ ಭಾವನೆಗಳನ್ನು ಕಲಕುವ ಶಕ್ತಿಯನ್ನು ಹೊಂದಿದೆ. ನಾವು ಆಗಾಗ್ಗೆ ಮಕ್ಕಳು ಹಾಡುಗಳನ್ನು, ಪ್ರಾಸಗಳನ್ನು ಹಾಡುವುದನ್ನು ಅಥವಾ ಗುನುಗುವುದನ್ನು ಮತ್ತು ಕೆಲವೊಂದು ಪರಿಚಿತ ಧ್ವನಿಗಳನ್ನು ಗುನುಗುವುದನ್ನು ಕಾಣುತ್ತೇವೆ... ಸಂಗೀತವು ಲಯ ಮತ್ತು ಮಾಧುರ್ಯವನ್ನು ಹೊಂದಿದ್ದು, ಇದು ವಿದ್ಯಾರ್ಥಿಗಳಿಗೆ ಭಾಷೆಯಲ್ಲಿ ನಿರರ್ಗಳತೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಪ್ರಾಸಗಳನ್ನು ಅಭಿನಯ ಮತ್ತು ಹಾವಭಾವಗಳೊಂದಿಗೆ ಹಾಡಿದಾಗ ಮಕ್ಕಳಿಗೆ ಇಂಗ್ಲಿಷ್‌ಪದಗಳು ಮತ್ತು ಅಭಿವ್ಯಕ್ತಿಗಳ ಅರ್ಥಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ.

ದೀಪಿಕಾ ಝೂಲಾ, ಇಂಗ್ಲಿಷ್‌ಭಾಷೆಯಲ್ಲಿ ಬಲವರ್ಧಕವಾಗಿ ಸಂಗೀತದ ಬಳಕೆ, ಪುಟ 73